2017 ಕ.ತೀ.ವ 404

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಶ್ರೀಮತಿ ಸುಜಾತ ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

2014–15ರ ಶೈಕ್ಷಣಿಕ ವರ್ಷಕ್ಕೆ ಬಿ.ಎಡ್.ಕೋರ್ಸ್ ವ್ಯಾಸಂಗ ಮಾಡಲು ಅರ್ಹತಾ ದೃಢೀಕರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ಕೋರಿ ಸದರಿ ರಿಟ್ ಅರ್ಜಿಗಳ ಸಲ್ಲಿಕೆ.

ಅರ್ಜಿದಾರರು ದಾಖಲಾದ ಕಾಲೇಜು ಅವಶ್ಯಕ ಸಂಪನ್ಮೂಲವನ್ನಾಗಲೀ ಮತ್ತು ಶಿಕ್ಷಣವನ್ನು ಬೋಧಿಸಲು ಸೂಕ್ತ ಸಿಬ್ಬಂದಿಯನ್ನು ಹೊಂದಿಲ್ಲದಿರುವುದರಿಂದ ಅರ್ಜಿದಾರರನ್ನು ವಿಶ್ವವಿದ್ಯಾನಿಲಯದ ಅನುಮೋದನೆಯ ಆದೇಶವಿಲ್ಲದೆ ಕೋರ್ಸಿಗೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ವಜಾಗೊಳಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

*1. (2010) 12 ಎಸ್‌ಸಿಸಿ 609*
*ರಾಜಾಸ್ಥಾನ ಪ್ರದೇಶ ವೈದ್ಯ ಸಮಿತಿ*
*–ವಿರುದ್ಧ– ಯೂನಿಯನ್ ಆಫ್ ಇಂಡಿಯಾ (ಉಲ್ಲೇ) 10*

*ರಿಟ್ ಅರ್ಜಿ ಸಂಖ್ಯೆ: 203754–203854/2015 (ಇಡಿಎನ್–ಆರ್‌ಇಎಸ್), ದಿನಾಂಕ: 24ನೇ ಜನವರಿ, 2017.

ಅರ್ಜಿದಾರರ ಪರ : ಶ್ರೀ ಅಮೀತ್ ಕುಮಾರ್ ದೇಶಪಾಂಡೆ, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಅರ್ಚನ ಪಿ. ತಿವಾರಿ, ವಕೀಲರು.
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎ. ವಿಜಯಕುಮಾರ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎಸ್. ವೇಣುಗೋಪಾಲ ಗೌಡ :**

ಅರ್ಜಿದಾರರು, ಅರ್ಜಿದಾರ ಸಂಖ್ಯೆ 101 – ಶ್ರೀಮತಿ ಇಂದಿರಾಗಾಂಧಿ ಶಿಕ್ಷಣ ಕಾಲೇಜು, ಕಲ್ಬುರ್ಗಿ ಪರವಾಗಿ ಅಧಿಪ್ರಮಾಣಿತ ಆದೇಶವನ್ನು ಸಹ ನೀಡುವ ಮೂಲಕ ಅರ್ಜಿದಾರ ಸಂಖ್ಯೆ 1 ರಿಂದ 100ರ ವರೆಗಿನ ಅರ್ಜಿದಾರರಿಗೆ ಸಂಬಂಧಿಸಿದಂತೆ 2014–15ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಬಿ.ಎಡ್. ಕೋರ್ಸನ್ನು ಮುಂದುವರೆಸಿ, ಪೂರ್ಣಗೊಳಿಸಲು ಅರ್ಹತಾ ಪ್ರಮಾಣಪತ್ರ(ಗಳ)ನ್ನು ನೀಡುವ ವಿಷಯದಲ್ಲಿ ಗುಲ್ಬರ್ಗಾ ವಿಶ್ವ ವಿದ್ಯಾಲಯಕ್ಕೆ ನಿರ್ದೇಶನಗಳನ್ನು ನೀಡಲು ಕೋರಿರುತ್ತಾರೆ.

2. 1 ರಿಂದ 100ರ ವರೆಗಿನ ಅರ್ಜಿದಾರರು, (ಇನ್ನು ಮುಂದೆ ವಿದ್ಯಾರ್ಥಿಗಳು ಎಂದು ಉಲ್ಲೇಖಿಸಲಾಗಿರುತ್ತದೆ) ಅರ್ಜಿದಾರ ಸಂ.101 ಅಂದರೆ, ಶ್ರೀಮತಿ ಇಂದಿರಾ ಗಾಂಧಿ ಶಿಕ್ಷಣ ಕಾಲೇಜು, ಕಲ್ಬುರ್ಗಿ –585 103 (ಇನ್ನು ಮುಂದೆ 'ಕಾಲೇಜು' ಎಂದು ಉಲ್ಲೇಖಿಸಲಾಗಿರುತ್ತದೆ) ಇಲ್ಲಿ 2014/15ನೇ ಶೈಕ್ಷಣಿಕ ವರ್ಷದಲ್ಲಿ ಬಿ.ಎಡ್. ಕೋರ್ಸಿಗೆ ದಾಖಲಾಗಿರುತ್ತಾರೆ. ಕಾಲೇಜಿನ ಪ್ರಕಾರ ವಿದ್ಯಾರ್ಥಿಗಳು 24.11.2014ರಿಂದ 31.1.2015ರ ನಡುವೆ ದಾಖಲಾಗಿದ್ದು, ದಾಖಲಾತಿ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಕಾಲೇಜು, ವಿದ್ಯಾರ್ಥಿಗಳ ಅರ್ಹತಾ ಶುಲ್ಕಗಳಿಗೆ ಸಂಬಂಧಿಸಿದಂತೆ ಕಳುಹಿಸಿದ ಡಿಮ್ಯಾಂಡ್ ಡ್ರಾಫ್ಟನ್ನು ಯಾವುದೇ ಕಾರಣವನ್ನು ತಿಳಿಸದೆ ಹಿಂದಿರುಗಿಸಿದ್ದು, ಅಂಗೀಕೃತ ಪ್ರಮಾಣಪತ್ರವನ್ನು ನೀಡುವಲ್ಲಿ ವಿಶ್ವವಿದ್ಯಾಲಯವು ವಿಫಲವಾಗಿದೆ ಎಂದು ತನ್ನ ವಾದವನ್ನು ಮಂಡಿಸಿರುತ್ತದೆ.

ವಿಶ್ವವಿದ್ಯಾಲಯವು ಈ ಕುರಿತು ಯಾವುದೇ ಕ್ರಮ ತೆಗೆದುಕೊಳ್ಳದಿರುವುದನ್ನು ಆಪಾದಿಸಿ, 22.07.2015ರಂದು ಆರಂಭವಾಗಲು ಅನುಸೂಚಿತವಾಗಿರುವ 1ನೇ ಸೆಮಿಸ್ಟರ್ ಬಿ.ಎಡ್. ಕೋರ್ಸಿನ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳಿಗೆ ಅನುಮತಿ ನೀಡಿ, ವಿಶ್ವವಿದ್ಯಾಲಯದ ವಿರುದ್ಧ ಏಕಪಕ್ಷೀಯವಾಗಿ ಮಧ್ಯಂತರ ಆದೇಶವನ್ನು ಹೊರಡಿಸಬೇಕೆಂದು ಕೋರಿ 17.7.2015ರಂದು ಈ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಮಧ್ಯಂತರ ಆದೇಶದಲ್ಲಿ ವಿದ್ಯಾರ್ಥಿಗಳು ಯಾವುದೇ ಹಕ್ಕನ್ನು ಹಾಗೂ ವಿಶ್ವವಿದ್ಯಾಲಯವು ಪೂರ್ವಾನುಮೋದನೆ ಇಲ್ಲದೆ ಯಾವುದೇ ಫಲಿತಾಂಶವನ್ನು ಘೋಷಿಸತಕ್ಕದ್ದಲ್ಲವೆಂದು ಸ್ಪಷ್ಟಪಡಿಸಲಾಗಿತ್ತು.

3. ಆಕ್ಷೇಪಣೆಗಳಲ್ಲಿ, ವಿಸ್ತೃತವಾದ ವಿವರಣೆಗಳನ್ನು ದಾಖಲಿಸುವ ಮೂಲಕ ವಿಶ್ವವಿದ್ಯಾಲಯವು ಹಲವಾರು ಆಯಾಮಗಳಲ್ಲಿ ಮೊಕದ್ದಮೆಯನ್ನು ವಿರೋಧಿಸಿರುತ್ತದೆ.

4. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ತರುವಾಯ ಹಾಗೂ ಪ್ರಕರಣದ ದಾಖಲೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ತರುವಾಯ, ವಿಶ್ವವಿದ್ಯಾಲಯದಿಂದ ಅನುಮೋದನೆಯ ಆದೇಶವನ್ನು ಪಡೆಯದೆ 2012–13ರ ತರುವಾಯದ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಬಿ.ಎಡ್. ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿರುವುದು ಸ್ಪಷ್ಟವಾಗಿರುತ್ತದೆ. ರಿಟ್ ಅರ್ಜಿ ಸಂ.102099/2013 ಮತ್ತು ಸಂಬಂಧಪಟ್ಟ ಪ್ರಕರಣಗಳಲ್ಲಿ ಕಾಲೇಜಿಗೆ ವಿರುದ್ಧವಾಗಿ ಹೊರಡಿಸಿದ ಮಧ್ಯಂತರ ಆದೇಶಗಳನ್ನು ಇದು ಅಲಕ್ಷಿಸಿರುತ್ತದೆ. ರಿಟ್ ಅರ್ಜಿ ಸಂಖ್ಯೆ 102099/2013ರ ಹಾಗೂ ತತ್ಸಂಬಂಧಿತ ಪ್ರಕರಣಗಳು ಇತ್ಯರ್ಥದಲ್ಲಿದ್ದಾಗ್ಯೂ, ಈ ಅರ್ಜಿಗಳನ್ನು ಸಲ್ಲಿಸಿದ ದಿನದಂದು, ಈ ಅರ್ಜಿಗಳಲ್ಲಿ ಆ ವಿಷಯದ ಬಗ್ಗೆ ಒಂದೇ ಒಂದು ಸೊಲ್ಲನ್ನೂ ಎತ್ತಲಿಲ್ಲ. ಹಾಗಾಗಿ, 19.07.2013ರಂದು ಹೊರಡಿಸಿದ ಆದೇಶ ಅಂದರೆ ಈ ಮುಂದೆ ಉಲ್ಲೇಖಿಸಿರುವಂಥ ರಿಟ್ ಅರ್ಜಿ ಸಂ. 102099/2013ನ್ನು ನ್ಯಾಯಾಲಯದ ಗಮನಕ್ಕೆ ತರುವುದನ್ನು

ತಪ್ಪಿಸಿ, ಇತ್ಯರ್ಥದಲ್ಲಿರುವ ದಾವೆಯನ್ನು ಮರೆ ಮಾಚಿರುವುದು ಕಂಡು ಬರುತ್ತದೆ. ಈ ಎಲ್ಲಾ ನಡೆಯಿಂದ ಕಾಲೇಜು ಶುದ್ಧಹಸ್ತದಿಂದ ನ್ಯಾಯಾಲಯದ ಬಳಿ ಬಂದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಅಗತ್ಯವಾದ ಮಾನ್ಯತೆ ಅಥವಾ ಅಂಗೀಕಾರವನ್ನು ಪಡೆದುಕೊಳ್ಳದೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಶೈಕ್ಷಣಿಕ ಸಂಸ್ಥೆಗಳ ನಡೆಯು ದೋಷಪೂರಿತವಾಗಿದ್ದಾಗ್ಯೂ, ಆ ವಿಚಾರದ ಬಗ್ಗೆ ಅರ್ಜಿದಾರ ಸಂ.101 ಕಾಲೇಜು ಗೊತ್ತಿದ್ದೂ ತಪ್ಪನ್ನೇ ಎಸಗಿ, ತನ್ನ ಎಲ್ಲಾ ಕಾನೂನುಬಾಹಿರ ಕ್ರಮಗಳಿಂದ ಹೊರ ಬರಲು ಮುಗ್ಧ ವಿದ್ಯಾರ್ಥಿಗಳ ಭವಿಷ್ಯವನ್ನು ಉಳಿಸಬೇಕೆಂಬ ಸಾಮಾನ್ಯ ವಾದವನ್ನೇ ಮಾಡುತ್ತಿದೆ. ಕಾಲೇಜು ಮಾನ್ಯತೆ ಪಡೆಯುವುದಕ್ಕೆ ಹೆಚ್ಚಿನ ಲಕ್ಷ್ಯ ನೀಡದೆ, ಕಾನೂನು ಬಾಹಿರವಾಗಿಯೇ 2012–13ರಿಂದಲೇ ಬಿ.ಎಡ್.ಕೋರ್ಸ್‌ಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲು ಹೆಚ್ಚಿನ ಉತ್ಸಾಹ ತೋರಿರುವುದು ಕಂಡು ಬರುತ್ತದೆ.

5. 2015ರ ಜುಲೈನಲ್ಲಿ ನಡೆದ ಪರೀಕ್ಷೆಯ ಫಲಿತಾಂಶವನ್ನು ವಿದ್ಯಾರ್ಥಿಗಳಿಗೆ ನೀಡಿ ಘೋಷಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಲು ಶ್ರೀ ಅಮಿತ್ ಕುಮಾರ್‌ದೇಶಪಾಂಡೆ ಐ.ಎ.1 ನ್ನು ಸಲ್ಲಿಸಿರುತ್ತಾರೆ. ಪರಸ್ಪರ ವಿರುದ್ಧದ ವಾದ ಪ್ರತಿವಾದಗಳನ್ನು ಹಾಗೂ ಪ್ರಕರಣದ ದಾಖಲೆಯನ್ನು ಅಲ್ಲದೆ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಕಾಲೇಜು ಮುಕ್ತವಾಗಿಲ್ಲವೆಂದು, ಕಾಲೇಜಿಗೆ ರಿಟ್ ಅರ್ಜಿ ಸಂಖ್ಯೆ: 102099/2013ರಲ್ಲಿ 19.07.2013ರಂದು ನಿರ್ದಿಷ್ಟ ನಿರ್ದೇಶನಗಳನ್ನು ನೀಡಿರುವುದನ್ನು ಸಹ ಗಮನಿಸಿ 14.01.2016ರ ದಿನಾಂಕದ ಆದೇಶದ ಮೇರೆಗೆ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. 18.01.2016ರಿಂದ ಆರಂಭವಾಗುವ IIನೇ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಹಾಜರಾಗುವುದಕ್ಕೆ ವಿದ್ಯಾರ್ಥಿಗಳಿಗೆ ಅನುಮತಿ ನೀಡಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡುವುದಕ್ಕೆ ಸಂಬಂಧಿಸಿದ ಐ.ಎ.2ನ್ನು ಐ.ಎ.1 ಕುರಿತಂತೆ ಹೊರಡಿಸಿದ ತಿರಸ್ಕೃತ ಆದೇಶದ ಕಾರಣದ ಮೇಲೆ ತಿರಸ್ಕರಿಸಲಾಗಿರುತ್ತದೆ. ಸದರಿ ಆದೇಶಗಳು ಅಂತಿಮವಾದವುಗಳಾಗಿವೆ. ಐ.ಎ.2ರಲ್ಲಿ ಕೋರಿದ ನಿರ್ದಿಷ್ಟ ಅನುಮತಿಯನ್ನು

ನಿರಾಕರಿಸಿದ್ದಾಗ್ಯೂ, ಕಾಲೇಜು ವಿಶ್ವವಿದ್ಯಾಲಯದೊಂದಿಗೆ ಹೇಗೋ ವ್ಯವಹರಿಸಿ, ವಿದ್ಯಾರ್ಥಿಗಳು IIನೇ ಸೆಮಿಸ್ಟರ್ ಪರೀಕ್ಷೆಯನ್ನು ತೆಗೆದುಕೊಂಡಿರುವುದು ನಿಜಕ್ಕೂ ಆಘಾತಕಾರಿ ಸುದ್ದಿಯಾಗಿದೆ. ಈ ಹಿಂದೆ ಗಮನಿಸಿದಂತೆ, 19.07.2013ರಂದು ಅಂದರೆ ರಿಟ್ ಅರ್ಜಿ ಸಂ.102099/2013ರಲ್ಲಿನ ಹೊರಡಿಸಿದ ಆದೇಶದ ಹಿನ್ನೆಲೆಯಲ್ಲಿ, 2014–15ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳು ದಾಖಲಾದರೆ ಅದು ಖಂಡಿತವಾಗಿಯೂ ಆಕ್ಷೇಪಾರ್ಹವಾದುದಾಗಿರುತ್ತದೆ ಹಾಗೂ ಅದು ಕಾನೂನುಬಾಹಿರ ಹಾಗೂ ಕಾಲೇಜಿನ ಖಂಡನಾರ್ಹ ಕ್ರಮವೆಂಬುದನ್ನು ತೋರಿಸುತ್ತದೆ.

6. ದಿನಾಂಕ 31.08.2016ರಂದು ಪರಸ್ಪರ ವಿರುದ್ಧವಾದ ವಾದಗಳನ್ನು ಪರಿಗಣಿಸಿ, ಪ್ರಕರಣ ದಾಖಲಿಸಿಕೊಂಡು ಬಿ.ಎಡ್.ಕೋರ್ಸನ್ನು ನಡೆಸಲು ಅನುಮತಿ ಕೋರಿ ಕಾಲೇಜು ಮಾಡಿಕೊಂಡಿರುವ ಕ್ಲೇಮನ್ನು ನಿರ್ಧರಿಸಲು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ. ಅದರ ಅನುಸರಣೆಯಲ್ಲಿ, ವಿಶ್ವವಿದ್ಯಾಲಯದ ಅಧಿಕಾರಿಗಳ ತಂಡವು ಪರಿಶೀಲನೆಯನ್ನು ನಡೆಸಿ, ಕಾಲೇಜು ಅನುಮತಿ ನೀಡಲು ತಕ್ಕ ಸೌಲಭ್ಯಗಳನ್ನು ಹೊಂದಿಲ್ಲವೆಂದು ಶಿಫಾರಸ್ಸು ಮಾಡಿರುತ್ತದೆ. ಈ ಪ್ರಕರಣದ ದಾಖಲೆಯನ್ನು ಮಂಡಿಸಿ, ಪರಿಶೀಲನಾ ವರದಿಯ ಪ್ರತಿಯನ್ನು ಅದರ ಅನುಬಂಧಗಳೊಂದಿಗೆ, ದಿನಾಂಕ 15.9.2016ರ ಆದೇಶದ ಮೇರೆಗೆ ಅದಕ್ಕೆ ಪ್ರತಿಯಾಗಿ ವಾದ ಮಂಡಿಸಲು ಅರ್ಜಿದಾರರ ಪರ ಮಾನ್ಯ ವಕೀಲರಿಗೆ ಒದಗಿಸಲಾಗುತ್ತದೆ. ಶ್ರೀ ಅಮಿತ್ ಕುಮಾರ್ ದೇಶಪಾಂಡೆಯವರು, ಪರಿಶೀಲನಾ ವರದಿಯಲ್ಲಿನ ಅಂಶಗಳಿಗೆ ಕಾಲೇಜು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಹಾಗಾಗಿ ಮೂಲ ಸೌಕರ್ಯ ಹಾಗೂ ಬೋಧನಾ ವರ್ಗಗಳೆರಡರಲ್ಲೂ ಸಾಕಷ್ಟು ಕೊರತೆಗಳಿರುವುದರಿಂದ ಪರಿಶೀಲನಾ ವರದಿಯನ್ನು ಒಪ್ಪಿಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ.

7. ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸುವಾಗ, ವಿವಾದಿತ ಕಾಲೇಜಿಗೆ ಭೇಟಿ ನೀಡಿದಂಥ ನಾಲ್ವರು ಸದಸ್ಯರನ್ನು ಒಳಗೊಂಡ ಸಮಿತಿಯು, ಬೋಧಕ ವರ್ಗದ ಸದಸ್ಯರನ್ನೂ ಒಳಗೊಂಡಂತೆ ಮೂಲ ಸೌಕರ್ಯದ ಕೊರತೆ ಇದೆಯೆಂಬ

ಹಾಗೂ ವರದಿಯನ್ನು 08.12.2011ರಂದು ಸಲ್ಲಿಸಿ, ಸದರಿ ಉಲ್ಲೇಖದೊಂದಿಗೆ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸದರಿ ಠರಾವಿಗೆ ಪರಿಣಾಮವನ್ನು ನೀಡಲು ವಿಫಲರಾದಂಥ ಕರ್ತವ್ಯ ಚ್ಯುತ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದ್ದು, ವಿಶ್ವವಿದ್ಯಾಲಯವು ಈ ಸಂಬಂಧದಲ್ಲಿ ಗಂಭೀರ ಸ್ವರೂಪದ ಲೋಪಗಳನ್ನು ಹಾಗೂ ತಪ್ಪುಗಳನ್ನು ಮಾಡಿಕೊಂಡು ತಡವಾಗಿ 20.01.2015ರಂದು ಅಧಿಸೂಚನೆಯನ್ನು (ಅನುಬಂಧ–ಆರ್1) ಹೊರಡಿಸಿರುತ್ತದೆಂಬುದು ಗುಲ್ಬರ್ಗ ವಿಶ್ವವಿದ್ಯಾಲಯದ ಸಿಂಡಿಕೇಟ್ ಮೂಲಕ ವಿಷಯ ಸಂಖ್ಯೆ 34ನ್ನು ಕುರಿತಂತೆ ಹೊರಡಿಸಿದ 30.12.2011ನೇ ದಿನಾಂಕದ ಠರಾವಿನ ತೀರ್ಮಾನವಾಗಿತ್ತೆಂಬುದು ತಿಳಿದು ಬರುತ್ತದೆ. ಈ ಕುರಿತಂತೆ ಶ್ರೀ ಎ. ವಿಜಯ್ ಕುಮಾರ್ ಹೇಳಿರುವಂತೆ ಪ್ರಸ್ತಾವದಲ್ಲಿರುವ ಪ್ರಕ್ರಿಯೆಯು ಒಂದು ತಾರ್ಕಿಕ ಹಂತವನ್ನು ತಲುಪಿ, ಈ ನ್ಯಾಯಾಲಯಕ್ಕೆ ವಿಶ್ವ ವಿದ್ಯಾಲಯವು ಅನುಪಾಲನಾ ವರದಿಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಸಲ್ಲಿಸುತ್ತದೆ ಎಂದು ನಿರೀಕ್ಷಿಸಲಾಗುತ್ತಿದೆ.

8. ದಿನಾಂಕ 31.08.2016 ಹಾಗೂ ದಿನಾಂಕ 03.01.2017ರಂದು ಹೊರಡಿಸಿದ ಆದೇಶಗಳನ್ನು ಅನುಸರಿಸಿ, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರು ದಿನಾಂಕ 04.01.2017ರಂದು ವಿಚಾರಣೆ ನಡೆಸಿದ್ದು, ಇದರಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ವ್ಯವಸ್ಥಾಪನಾ ಪ್ರತಿನಿಧಿಗಳು ಪಾಲ್ಗೊಂಡಿದ್ದು, ನಡಾವಳಿಯ ವರದಿಯನ್ನು ಲಗತ್ತಿಸಿ ದಿನಾಂಕ 09.01.2017ರಂದು ಶ್ರೀ ಎ. ವಿಜಯ್‌ಕುಮಾರ್ ಒಂದು ಮೆಮೊವನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ಶ್ರೀ ಅಮಿತ್‌ಕುಮಾರ್ ದೇಶಪಾಂಡೆಗೆ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾಲಯದ ಪರಿಶೀಲನಾ ತಂಡವು ಎತ್ತಿಹಿಡಿದ ಅಲ್ಲದೆ, ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ಎತ್ತಿಹಿಡಿದ ಎಲ್ಲಾ ಕೊರತೆಗಳನ್ನು ಪರಿಹರಿಸುವ ಅನುಪಾಲನಾ ಮುಚ್ಚಳಿಕೆಯನ್ನು ಕಾಲೇಜನ್ನು ನಡೆಸುತ್ತಿರುವಂಥ ನ್ಯಾಸದ ಅಧ್ಯಕ್ಷರಾದ ಶ್ರೀ ಘರೀಬ್ ಸಾಬ್‌ರವರ ಮಗನಾದ ಮೌಲಾಸಾಬ್

ಇವರು ಸಲ್ಲಿಸಿರುತ್ತಾರೆ. ಮೌಲಾಸಾಬ್‌ರವರಿಂದ ಸೂಚನೆಗಳನ್ನು ಪಡೆದುಕೊಂಡು ಶ್ರೀ ಅಮಿತ್‌ಕುಮಾರ್ ದೇಶಪಾಂಡೆ, ನ್ಯಾಯಾಲಯದಲ್ಲಿ ಹಾಜರಾಗಿ, ಎಲ್ಲಾ ಕೊರತೆಗಳನ್ನು ಹಂತಹಂತವಾಗಿ, ದಿನಾಂಕ 30.04.2017ರೊಳಗೆ ಪರಿಹರಿಸಿಕೊಳ್ಳುವುದಾಗಿ ನಿವೇದಿಸಿಕೊಂಡಿರುತ್ತಾರೆ. ವಿಶ್ವವಿದ್ಯಾಲಯದ ಪರ ಹಾಜರಾದ ಮಾನ್ಯ ವಕೀಲರು ದಿನಾಂಕ 18.01.2017ರಂದು ಸಲ್ಲಿಸಿದ ಮೆಮೋದ ಉಲ್ಲೇಖದೊಂದಿಗೆ, ಕಾಲೇಜು ಪೂರ್ಣಗೊಳಿಸಬೇಕಾದ ಆವಶ್ಯಕ ಷರತ್ತುಗಳನ್ನು ಎತ್ತಿ ಹಿಡಿದು, ಶ್ರೀ ಮೌಲಾಸಾಬ್‌ರವರು ಅಫಿಡಾವಿಟ್ಟನ್ನು, ಎಲ್ಲಾ ಕೊರತೆಗಳನ್ನು ಪರಿಹರಿಸುವ ಅನುಪಾಲನಾ ಮುಚ್ಚಳಿಕೆಯನ್ನು ಸಲ್ಲಿಸಿ, ವಿಶ್ವವಿದ್ಯಾಲಯವನ್ನು ಸಂಧಿಸಿ, ಹಣಕಾಸಿನ ಬಾಕಿಗಳನ್ನು ಪರಿಶೀಲಿಸಿ, ಅದನ್ನು ಇರಸಾಲು ಮಾಡಿರುತ್ತಾರೆ. ಕಾಲೇಜು, ಸದರಿ ಮುಚ್ಚಳಿಕೆಯ ನಿಬಂಧನೆಗಳಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಇದಕ್ಕೆ ತಪ್ಪಿದ ಸಂದರ್ಭದಲ್ಲಿ, ಶ್ರೀ ಮೌಲಾಸಾಬ್ ಹಾಗೂ ಕಾಲೇಜಿನ ವಿರುದ್ಧದ ನಡಾವಳಿಗಳು ನ್ಯಾಯಾಲಯ ನಿಂದನೆಯನ್ನು ಒಳಗೊಂಡಂತೆ ಸೂಕ್ತ ನಡಾವಳಿಯನ್ನು ಆರಂಭಿಸಲು ವಿಶ್ವ ವಿದ್ಯಾಲಯವು ಮುಕ್ತವಾಗಿರುತ್ತದೆ.

9. ವಿಶ್ವವಿದ್ಯಾಲಯದ ಮಾನ್ಯತೆಯ ಆದೇಶವಿಲ್ಲದಿದ್ದು, ರಿಟ್ ಅರ್ಜಿ ಸಂ.102099/2013 ಮತ್ತು ತತ್ಸಂಬಂಧಿ ಪ್ರಕರಣಗಳಲ್ಲಿ ಹೊರಡಿಸಿದ ದಿನಾಂಕ 19.02.2013ರ ಆದೇಶದ ತೀವ್ರ ವಿರೋಧವಿದ್ದಾಗ್ಯೂ ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ದಾಖಲಾತಿ ಮಾಡಿಕೊಳ್ಳುವ ಕಾನೂನುಬಾಹಿರ ಕೃತ್ಯಗಳಲ್ಲಿ ಕಾಲೇಜು ಭಾಗವಹಿಸಿರುವುದು ಪ್ರಕರಣದ ದಾಖಲೆಯಿಂದ ಸ್ಪಷ್ಟವಾಗಿರುತ್ತದೆ. ಕಾಲೇಜು ನ್ಯಾಯಾಲಯದ ಬಾಗಿಲನ್ನು ತಟ್ಟುವ ಮೂಲಕ ತನ್ನ ಕಾನೂನುಬಾಹಿರ ಚಟುವಟಿಕೆಗಳನ್ನು ಕಾನೂನುಬದ್ಧಗೊಳಿಸಿಕೊಳ್ಳಲು, ತಂತ್ರ ಹಾಗೂ ಕಾರ್ಯತಂತ್ರವನ್ನು ಅಳವಡಿಸಿಕೊಂಡಿರುವುದರಿಂದ ಕಾಲೇಜು ಯಾವುದೇ ರೀತಿಯ ಅನುಕಂಪಕ್ಕೆ ತಕ್ಕದ್ದಾಗಿರುವುದಿಲ್ಲ ಹಾಗೂ ಪರೀಕ್ಷೆಗಳು ಆರಂಭವಾಗುವುದಕ್ಕೆ ಸ್ವಲ್ಪ ದಿನ ಮೊದಲು ತನ್ನ ವಿದ್ಯಾರ್ಥಿಗಳನ್ನು ಮುಂದೆ ತಂದು, ಮುಗ್ಧ ವಿದ್ಯಾರ್ಥಿಗಳು ಎಂಬ ಸಾಮಾನ್ಯ ವಾದದ ಮೇಲೆ ಹಾಗೂ ಅವರ ಹಕ್ಕಿನ ಕ್ಲೇಮಿನ ಮೇಲೆ ಮಧ್ಯಂತರ ಆದೇಶಗಳನ್ನು ಏಕಪಕ್ಷೀಯವಾಗಿ ಪಡೆಯಲು ಪ್ರಯತ್ನಿಸಿರುವುದನ್ನು

ಪುರಸ್ಕರಿಸಲು ಸಾಧ್ಯವಾಗುವುದಿಲ್ಲವೆಂಬುದು, ರಿಟ್ ಅರ್ಜಿ ಸಂಖ್ಯೆ: 102099/2013 ಹಾಗೂ ತತ್ಸಂಬಂಧಿ ಪ್ರಕರಣಗಳನ್ನು ಇತ್ಯರ್ಥಪಡಿಸುವಾಗ ದಿನಾಂಕ 09.01.2017ರ ಆದೇಶದ ಪ್ರಕಾರ ವಜಾ ಮಾಡಿರುವ ಮೂಲಕ ಸ್ಪಷ್ಟವಾಗಿರುತ್ತದೆ. ವಿಶ್ವವಿದ್ಯಾಲಯವು ಸಕಾಲಿಕ, ಕಾರ್ಯತತ್ಪರ ಕ್ರಮವನ್ನು ತೆಗೆದುಕೊಳ್ಳುವಲ್ಲಿ ವಿಫಲವಾಗಿರುವುದರಿಂದ ಕಾಲೇಜು ಕಾನೂನು ಬಾಹಿರ ದಾಖಲಾತಿಯನ್ನು ಮಾಡಿಕೊಂಡಿರುತ್ತದೆ. ಇದರಿಂದ, ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸಬೇಕು ಎಂಬ 30.12.2011ರಂದು ವಿಷಯ ಸಂಖ್ಯೆ 34ನ್ನು ಕುರಿತಂತೆ ಸಿಂಡಿಕೇಟ್ ಠರಾವನ್ನು ಹೊರಡಿಸಿದ್ದಾಗ್ಯೂ, ಅದನ್ನು ಯಾವುದೇ ಕಾರಣಕ್ಕೂ ಅನುಸರಿಸಿಲ್ಲವೆಂಬುದು ಸ್ಪಷ್ಟವಾದ ಅಂಶವಾಗಿರುತ್ತದೆ. ವಿಶ್ವವಿದ್ಯಾಲಯದಲ್ಲಿನ ಕೆಲವು ಅನಪೇಕ್ಷಿತ ವ್ಯಕ್ತಿಗಳು ಕಾಲೇಜಿನೊಂದಿಗೆ ಷಾಮೀಲಾಗಿದ್ದು, ಸುಮಾರು ಕಳೆದ ಐದು ವರ್ಷಗಳಿಂದಲೂ ಅವರಿಗೆ ಕಳಂಕಿತ ನೆರವು ನೀಡಿಕೊಂಡು ಬಂದಿರುವುದು ಎದ್ದುಕಾಣುತ್ತದೆ. ಇದು ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ಮಾತ್ರವಾಗಿರದೆ ಮುಗ್ಧ ವಿದ್ಯಾರ್ಥಿಗಳ ಹಿತಾಸಕ್ತಿಯಿಂದ ಹೆಚ್ಚು ತಡಮಾಡದೆ ಪರಿಹಾರ ಕ್ರಮ ಕೈಗೆತ್ತಿಕೊಳ್ಳಲು ವಿಶ್ವವಿದ್ಯಾಲಯ ಕಣ್ಣು ತೆರೆಯಲೇಬೇಕಾದ ಸಂದರ್ಭವಾಗಿರುತ್ತದೆ.

10. ***ರಾಜಾಸ್ಥಾನ್ ಪ್ರದೇಶ ವೈದ್ಯ ಸಮಿತಿ –ವಿರುದ್ಧ– ಯೂನಿಯನ್ ಆಫ್ ಇಂಡಿಯಾ***[1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

> ‘‘22. ಅಗತ್ಯವಾದ ಮಾನ್ಯತೆ ಹಾಗೂ ಅಂಗೀಕಾರವಿಲ್ಲದೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡು ಪರೀಕ್ಷೆ ಬರೆಯಲು ಅನುವು ಮಾಡಿಕೊಟ್ಟಿರುವ ಶೈಕ್ಷಣಿಕ ಸಂಸ್ಥೆಯ ನಡೆಯನ್ನು ಈ ನ್ಯಾಯಾಲಯವು ಮೌಲ್ಯರಹಿತವಾದುದೆಂದು ತೀಮಾನಿಸಿರುತ್ತದೆ.

1. (2010) 12 ಎಸ್‌ಸಿಸಿ 609

ಇಂತಹ ಸ್ವರೂಪದ ಕಾನೂನಿನ ಉಲ್ಲಂಘನೆಯನ್ನು ತೀವ್ರತರವಾದ ಹಾಗೂ ಗಂಭೀರ ಸ್ವರೂಪದ್ದೆಂದು ಪರಿಗಣಿಸಲಾಗುತ್ತದೆ. ಮಾನ್ಯತೆ ಪಡೆಯದ ಸಂಸ್ಥೆಯ ವಿದ್ಯಾರ್ಥಿಗಳು ಯಾವುದೇ ಸರ್ಕಾರ, ವಿಶ್ವವಿದ್ಯಾಲಯ ಅಥವಾ ಮಂಡಳಿಯು ನಡೆಸುವ ಯಾವುದೇ ಪರೀಕ್ಷೆಯಲ್ಲಿ ಹಾಜರಾಗಲು ಹಕ್ಕುಳ್ಳವರಾಗಿರುವುದಿಲ್ಲ. (ಸುನಿಲ್ ಓರಾನ್ –ವಿರುದ್ಧ– ಸಿಬಿಎಸ್ಇ, (2006) 13 ಎಸ್‌ಸಿಸಿ 673ರ ಮೇರೆಗೆ).

24. ತಮಿಳುನಾಡು ಸರ್ಕಾರ –ವಿರುದ್ಧ – ಸೈಂಟ್ ಜೋಸೆಫ್ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, (1991) 3 ಎಸ್‌ಸಿಸಿ 87, ಪ್ರಕರಣದಲ್ಲಿ ಈ ನ್ಯಾಯಾಲಯವು, ಮಾನ್ಯತೆ ಪಡೆಯದ ಸಂಸ್ಥೆಗಳ ವಿದ್ಯಾರ್ಥಿಗಳು ಸರ್ಕಾರವು ನಡೆಸುವ ಯಾವುದೇ ಸರ್ಕಾರಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಹಕ್ಕುಳ್ಳವರಾಗಿರುವುದಿಲ್ಲ ಹಾಗೂ ಅಂಥ ಸಂಸ್ಥೆಗಳಿಂದ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತವೆಂಬ ವ್ಯಕ್ತಿಗಳ ಕ್ಲೇಮನ್ನು ಕಾನೂನಿಗೆ ವಿರುದ್ಧವಾಗಿ ಮಾನವೀಯತೆಯ ಆಧಾರದ ಮೇಲೆ ಪರಿಹಾರವನ್ನು ನೀಡಲು ನ್ಯಾಯಾಲಯವು ಅನುಮತೀಯವಾಗಿರುವುದಿಲ್ಲ.

25. ಮೇಲಿನದರ ಹಿನ್ನೆಲೆಯಲ್ಲಿ, ಮಾನ್ಯತೆ ಪಡೆಯದ ಯಾವುದೇ ಸಂಸ್ಥೆಯು ಶಿಕ್ಷಣವನ್ನು ನೀಡುವಂತಿಲ್ಲ ಹಾಗೂ ಅಂಥ ಸಂಸ್ಥೆಯ ವಿದ್ಯಾರ್ಥಿಗಳು ಸರ್ಕಾರ, ವಿಶ್ವವಿದ್ಯಾಲಯ ಅಥವಾ ಮಂಡಳಿಯು ನಡೆಸುವ ಪರೀಕ್ಷೆಯಲ್ಲಿ ಹಾಜರಾಗಲು ಸಾಧ್ಯವಾಗುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

(ಇದಕ್ಕೆ ನನ್ನಿಂದ ಒತ್ತು ನೀಡಲಾಗಿರುತ್ತದೆ)

11. ಕಾಲೇಜು ಅಗತ್ಯ ಮೂಲ ಸೌಕರ್ಯವನ್ನು ಹಾಗೂ ಅಧ್ಯಯನದ ಕೋರ್ಸಿಗೆ ಶಿಕ್ಷಣ ನೀಡುವ ಅಗತ್ಯ ಬೋಧಕ ವರ್ಗದ ಸಿಬ್ಬಂದಿಯನ್ನು ಹೊಂದಿರುವುದಿಲ್ಲ. ವಿದ್ಯಾರ್ಥಿಗಳ ದಾಖಲಾತಿಯನ್ನು ವಿಶ್ವವಿದ್ಯಾಲಯದ ಮಾನ್ಯತೆಯ ಆದೇಶವಿಲ್ಲದೆ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ರಿಟ್ ಅರ್ಜಿ ಸಂಖ್ಯೆ: 102099/2013 ಹಾಗೂ ತತ್ಸಂಬಂಧಿ ಪ್ರಕರಣಗಳಲ್ಲಿ ಹೊರಡಿಸಿದ 19.07.2013 ದಿನಾಂಕದ ಆದೇಶವನ್ನು ಕಡೆಗಣಿಸಿದ್ದು, ಈ ಅರ್ಜಿಗಳಲ್ಲಿ ಕೋರಿದ ಎರಡು ನಿರ್ದೇಶನಗಳನ್ನು ಜಾರಿಗೊಳಿಸಿರುವುದಿಲ್ಲ ಎಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.

12. ಆದಾಗ್ಯೂ, ದಿನಾಂಕ 31.08.2016ರಂದು ಹೊರಡಿಸಿದ ಆದೇಶವನ್ನು ಹಾಗೂ ದಿನಾಂಕ 04.01.2017ರಂದು ನಡೆಸಿದ ತತ್ಸಂಬಂಧಿ ವಿಚಾರಣೆಯನ್ನು ಗಮನದಲ್ಲಿಟ್ಟುಕೊಂಡು, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರು ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದ ಕಾಲೇಜಿನ ಅರ್ಜಿಯ ಮೇಲೆ ಆದೇಶವನ್ನು ಹೊರಡಿಸಬೇಕು. ಇದಕ್ಕನುಸಾರವಾಗಿ ರಿಜಿಸ್ಟ್ರಾರ್‌ರವರು ಘೋಷಣೆಗೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಬೇಕಾಗಿರುತ್ತದೆ. ಇಲ್ಲವೆ 1 ರಿಂದ 100ರ ವರೆಗಿನ ಅರ್ಜಿದಾರರು ತೆಗೆದುಕೊಂಡಿರುವ ಪರೀಕ್ಷೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ಆದೇಶವನ್ನು ಹೊರಡಿಸಬೇಕಾಗಿರುತ್ತದೆ.

ತದನುಸಾರವಾಗಿ ಅರ್ಜಿಗಳನ್ನು ವಿಲೆ ಮಾಡಲಾಗಿರುತ್ತದೆ. ಗುಲ್ಬರ್ಗಾ ವಿಶ್ವ ವಿದ್ಯಾಲಯದ ರಿಜಿಸ್ಟ್ರಾರ್‌ರವರು, ಹಿಂದೆ ಹೇಳಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಕಾನೂನಿಗನುಸಾರವಾಗಿ, ಈ ಆದೇಶದ ಪ್ರತಿ ಲಭ್ಯವಾಗುವ ದಿನಾಂಕದಿಂದ 45 ದಿನಗಳ ಅವಧಿಯೊಳಗಾಗಿ ಆದೇಶವನ್ನು ಹೊರಡಿಸತಕ್ಕದ್ದು.

ಕಾಲೇಜು ಪರಿಶೀಲನಾ ತಂಡವು ನೀಡಿದ ಸೂಚನೆಗಳನ್ನು ಪಾಲಿಸುವವರೆಗೆ, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ದಿನಾಂಕ 04.01.2017ರ ನಡಾವಳಿಗಳಲ್ಲಿ ಎತ್ತಿ ಹಿಡಿದ ಎಲ್ಲಾ ಕೊರತೆಗಳನ್ನು ನಿವಾರಿಸುವವರೆಗೆ ಅಲ್ಲದೆ ವಿಶ್ವವಿದ್ಯಾಲಯದ

ಎಲ್ಲಾ ಬಾಕಿಗಳನ್ನು ಚುಕ್ತಾ ಮಾಡುವವರೆಗೆ ಬಿ.ಎಡ್. ಕೋರ್ಸ್‌ಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತಿಲ್ಲ.

ಭವಿಷ್ಯದಲ್ಲಿ, ಕಾಲೇಜಿನಲ್ಲಿನ ಅಧ್ಯಯನದ ಕೋರ್ಸಿಗೆ ಸಂಬಂಧಿಸಿದಂತೆ ಅಂದರೆ ಕಾಲೇಜಿನಿಂದಾಗಲಿ ಅಥವಾ ಅದರ ವಿದ್ಯಾರ್ಥಿಗಳಿಂದಾಗಲೀ ವ್ಯಾಜ್ಯವನ್ನು ಹೂಡುವ ಸಂದರ್ಭದಲ್ಲಿ ಮುಖ್ಯ ಸಂಗತಿಯನ್ನು ಅಡಗಿಸಿಡುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ, ಈ ಆದೇಶದ ಪ್ರತಿಯನ್ನು ದಾಖಲೆಗಳಲ್ಲಿ ಮಂಡಿಸಲೇಬೇಕೆಂಬುದಕ್ಕೆ ಕಾಲೇಜು ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದಾಗಿರುತ್ತದೆ.